ಪೆದ್ದನಂತೆ ಯಾವಾಗಲೂ ಸೋಲುಣ್ಣುವುದನ್ನು ನೋಡಿದ್ದರೂ ನಮ್ಮ ಸಂಗ ಯಾವತ್ತೂ ಸೋಲುಣ್ಣುವವನಲ್ಲ (ತಾಜಾ ಹಾಲನ್ನ ಉಣ್ಣುವವನು). ಒಂದೊಮ್ಮೆ ಸೋತರೂ ಸೋಲಿನ ಬಗ್ಗೆ ತಲೆಕೆಡಿಸಿಕೊಳ್ಳುವವನಲ್ಲ. 'ರಾಜಾ ಬಹುವಲ್ಲಭಾಃ' ಎಂಬ ಮಾತಿನಂತೆ ಈಗ ಈ ಏರಿಯಾದ ಹೆಣ್ಣು ಬೆಕ್ಕುಗಳ ಜೊತೆಗೆಲ್ಲ ರಿಲೇಶನ್‌ಶಿಪ್ಪಿನಲ್ಲಿ (ಎಷ್ಟಾದರೂ ಸಂಗನಲ್ಲವೇ?!) ಇರುವುದರಿಂದ ಮನೆಯ ಕಡೆ ಬರಲು ಬಿಡುವಾಗದೆ ವಾರಗಟ್ಟಲೆ ಕಾಣೆಯಾಗಿರುತ್ತಾನೆ. ಯಾವಾಗಲಾದರೂ ನೆನಪಾದರೆ ರಾತ್ರಿ ಕಿಟಕಿಯಿಂದ ಲಾಗಿನ್ ಆಗಿ, ಬೆಳಗ್ಗೆ ನಾವೆಲ್ಲ ಏಳುವ ಮೊದಲೇ ಅದೇ ವಿಂಡೋದಿಂದ ಲಾಗೌಟೂ ಆಗಿರುತ್ತಾನೆ. ತನ್ನ ಏರಿಯಾವೆಂದು ಸಾಬೀತುಪಡಿಸಲು ಅಷ್ಟ ದಿಕ್ಕುಗಳಿಗೂ ತನ್ನ ಶ್ರೇಷ್ಠ ಮಟ್ಟದ ಉಚ್ಚೆ ಸ್ಪ್ರೇ ಮಾಡುವುದನ್ನು ಮಾತ್ರ ಮರೆಯುವುದಿಲ್ಲ.

ಒಮ್ಮೆ ಟೀವಿಯಲ್ಲಿ ಯಾವುದೋ ಸಿನಿಮಾ ತೇಲಿ ಬರುತ್ತಿತ್ತು. ಗಂಡ ಲಾಲಿ ಹಾಡು ಹಾಡಿ ಹೆಂಡತಿಯನ್ನು ಮಲಗಿಸುತ್ತಿದ್ದ. 'ಇಂಥ ಗಂಡಂದಿರು ರಿಯಲ್ ಜೀವನದಲ್ಲೇನಾದರು ಇರಬಹುದಾ?...' ಅನ್ನುವ ನನ್ನ ಸಂಶಯ ನನಗೇ ಗೊತ್ತಿಲ್ಲದಂತೆ ನನ್ನ ಬಾಯಿಯಿಂದ ಹೊರಬಿದ್ದಿತ್ತು. ಒಂದು ಕುರ್ಚಿಯಲ್ಲಿ ಗಂಡ ಇನ್ನೊಂದರಲ್ಲಿ ಸಂಗ ಕೂತು ಸಿನಿಮಾ ನೋಡುತ್ತಿದ್ದರು. ನಾನು ಮಾತಾಡಿದ್ದು ಕೇಳಿತೋ ಇಲ್ಲವೋ ತಿಳಿಯಲಿಲ್ಲ. ಪುನಃ ಇನ್ನೊಮ್ಮೆ ರಿಪೀಟ್ ಮಾಡಿದೆ. ಉತ್ತರವೇ ಇಲ್ಲ... ಯಾಕೋ ಕವಿ ಟಿ.ಎಸ್. ಎಲಿಯಟ್‌ನ 'ಕ್ಯಾಟ್ಸ್ ಆರ್ ವೆರಿ ಮಚ್ ಲೈಕ್ ಯೂ ಅಂಡ್ ಮೀ...' ಪದ್ಯ ನೆನಪಾಯಿತು. ಇದು ಅವನ 'ಬೆಕ್ಕುಗಳನ್ನು ಏನೆಂದು ಕರೆಯಲಿ' (ಎಡ್–ರೆಸ್ಸಿಂಗ್ ಆಫ್ ಕ್ಯಾಟ್ಸ್) ಪದ್ಯದ ಸಾಲುಗಳು. 'ಲಂಡನ್ನಿನರ ಮನೆಗೆ ಇಂಗ್ಲಿಷ್ ಬೆಕ್ಕೂ ಮೈಸೂರಿನರ ಮನೆಗೆ ಕನ್ನಡ ಬೆಕ್ಕೂ ಹೋದ ವಸಾಹತುಶಾಹಿಯ ಆ ಕಾಲದಲ್ಲಿ ಜಾಗತಿಕವಾಗಿ ಬೆಕ್ಕುಗಳಿಗೆ ಇಲಿಗಳ ಮೇಲೆ ಆಸಕ್ತಿಯಿದ್ದದ್ದು ನಿಜವಾದರೂ... ಈಗ ಈ ಜಾಗತೀಕರಣದ ಕಾಲದಲ್ಲಿ ಅದು ಬಂಡವಾಳಶಾಹಿಯನ್ನು ಒಪ್ಪಿಕೊಂಡು ತನ್ನ ಮೂಲ ಸಂಸ್ಕೃತಿಯನ್ನೇ ಮರೆತಿದೆ...' ಪ್ರೊಫೆಸರೊಬ್ಬರು 'ಪುಸಿ ಕ್ಯಾಟ್' ಪದ್ಯವನ್ನು ವಿಮರ್ಶೆ ಮಾಡುತ್ತಿದ್ದರು. ಇಲ್ಲಿ ನಮ್ಮ ಸಂಗ ಈಗ ಇಲಿ ಇರುವ ಕಡೆ ತಲೆ ಹಾಕಿಯೂ ಮಲಗಲಾರ. ಇಲಿಗಳೆಂದರೆ ರಾತ್ರಿಯ ಸೊಳ್ಳೆಗಳಷ್ಟೇ ಕಿರಿಕಿರಿಯ ವಿಷಯ ಅವನಿಗೆ. ಇಲಿ ಹಿಡಿಯುವುದೆಲ್ಲ ತಲೆಯಿಲ್ಲದವರು ಮಾಡುವ ಚಿಲ್ಲರೆ ಕೆಲಸ ಎಂಬುದು ಅವನ ಅಂಬೋಣ. ಇರಲಿ... ಅವನದನ್ನೆಲ್ಲ ದಾಟಿ ಬಂದವನಲ್ಲವೇ?

ಕೆಲವು ವರ್ಷಗಳ ಹಿಂದೆ ಅಮೆರಿಕದ ಅಧ್ಯಕ್ಷರು ತಮ್ಮ ಶ್ವೇತಭವನದಲ್ಲಿ ಓಡಾಡುತ್ತಿದ್ದ ಬ್ಲ್ಯಾಕಿಯೋ ಕರ್ಪಿಯೋ ಆದ ಕರಿ ಹೆಣ್ಣು ಬೆಕ್ಕೊಂದಕ್ಕೆ 'ಇಂಡಿಯಾ' ಎಂಬ ಹೆಸರು ಇರಿಸಿದ್ದು ಇಂಡಿಯಾದಲ್ಲಿ ಸಾಕಷ್ಟು ಚರ್ಚೆಯಾಗಿತ್ತು. ಕೆಲವರು ಇದು ನಮ್ಮ ದೇಶಕ್ಕೆ ಮಾಡಿದ ಅವಮಾನ ಎಂದು ಕಿಡಿಕಾರಿ, ಅಮೆರಿಕ ಎನ್ನುವ ನೆಲವನ್ನು ಕಂಡುಹಿಡಿದ ಅಮೆರಿಗೊ ವೆಸ್ ಪುಸಿಯ ಹೆಸರನ್ನು ನಮ್ಮ ಕಂತ್ರಿ ಪುಸಿಗಳಿಗೆ ಇರಿಸಿ ಸೇಡು ತೀರಿಸಿಕೊಳ್ಳುವ ಬಿಟ್ಟಿ ಸಲಹೆಯನ್ನೂ ಕೊಟ್ಟಿದ್ದರು. ಇನ್ನು ಕೆಲವರು 'ಇದು ಅವರ ಮುದ್ದು ಹೆಸರು ಮಾತ್ರ, ಇದರಲ್ಯಾಕೆ ರಾಜಕೀಯ?' ಎಂದು ಕಿಡಿಕಾರಿದವರ ಬೆಂಕಿಗೆ ಸಮಾಧಾನದ ನೀರು ಎರಚಿದ್ದರು. ಆ ಬೆಕ್ಕಿನ ಪೂರ್ಣ ಹೆಸರು ಇಂಡಿಯಾ ವಿಲ್ಲಿ ಬುಷ್ ಎಂದೂ, ಅದು ಜಾರ್ಜ್ ಬುಷ್ ಮಗಳು ಬಾರ್ಬರಾ ಬಿಳಿ ಭವನದ ಕರಿಬೆಕ್ಕಿಗೆ ಪ್ರೀತಿಯಿಂದ ಇರಿಸಿದ ಹೆಸರು ಎಂದೂ, ಕೆಲವು ಪತ್ರಿಕೆಗಳು ದೇಶಾಭಿಮಾನಿಗಳ ಆತ್ಮಾಭಿಮಾನದ ಪ್ರದರ್ಶನಕ್ಕೆ ತಡೆ ಉಂಟುಮಾಡಿದ್ದವು. ವಿಷಯ ಅದಲ್ಲ, ಶ್ವೇತಭವನದಂತಹ ಶಕ್ತಿಕೇಂದ್ರದೊಳಗೂ ಎಲ್ಲೆಂದರಲ್ಲಿ ಓಡಾಡುವ ಭಾಗ್ಯ ಈ ಜೀವಿಗಳಿಗಲ್ಲದೆ ಇನ್ಯಾರಿಗಿರಲು ಸಾಧ್ಯ? ಎಂದು ಅವುಗಳ ಅದೃಷ್ಟಕ್ಕೆ ಮನುಷ್ಯರಾದ ನಾವು ಕರುಬಬೇಕಷ್ಟೇ! ಈ ಎಲ್ಲಾ ಗಲಾಟೆಗಳ ನಡುವೆ ಶ್ವೇತಭವನದ ಇಂಡಿಯಾ ಬೆಕ್ಕಿನ ದಿನಚರಿ ಹೇಗಿದ್ದಿರಬಹುದು? ಎಂಬ ಕುತೂಹಲ ಆಗ ನನ್ನನ್ನು ಕಾಡಿತ್ತು.